ಶ್ರೀ ಜಿ. ಎ. ಗೌಡ.—1868 ರೂಪಾಯಿ ಖರ್ಚು ಮಾಡಿದ್ದೇವೆ ಎಂದು ಹೇಳುತ್ತೀರಿ, ಒಂದು ಕಾನೂ ಖರ್ಚಾಗಿಲ್ಲ, ಅದನ್ನು ತನಿಖೆ ಮಾಡಿಸುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಮಾಡಿಸೋಣ.

ಶ್ರೀ ಡಿ. ಮುನಿಚನ್ನಪ್ಪ 300 ರೂಪಾಯಿನಿಂದ ಸಾವಿರದ ರೂಪಾಯಿಗಳವರೆಗೂ ಖರ್ಚು ಮಾಡಿರುವುದಾಗಿ ಲಿಸ್ಟ್ ಕೊಟ್ಟಿದ್ದೀರಿ. 500 ರೂಪಾಯಿನಲ್ಲಿ ಯಾವ ಕೆಲಸವೂ ಆಗುವುದಿಲ್ಲ. ಈ ತಾಲ್ಲೂಕಿನಲ್ಲಿ ಕೆರೆ ಬಿಟ್ಟರೆ ನೀರಿಗೆ ಬೇರೆ ಯಾವ ಆಶ್ರಯವೂ ಇಲ್ಲ ಆದ್ದರಿಂದ ನಮ್ಮ ತಾಲ್ಲೂಕಿನಲ್ಲಿರುವ ಕೆರೆಗಳನ್ನು ರಿಪೇರಿ ಮಾಡಿಸಿ, ಮಣ್ಣು ಎತ್ತಿ ತೂಬು ಸರಿಮಾಡಿಸಲು ಜಾಗ್ರತೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಆಲೂರು ಹನುಮಂತಪ್ಪ.—ಮಾಡುತ್ತೇವೆ, ಯಾವುದಾದರೂ ಒಂದು ನಿರ್ದಿಷ್ಟವಾದ ವಿಷಯ ಹೇಳಿದರೆ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಕೆ. ಲಕ್ಕಪ್ಪ.—ಯಾವುದೂ ಹೊಸ ಕೆಲಸ ಮಾಡಕೂಡದು ಎಂಬುದಾಗಿ ಚೀಫ್ ಇಂಜಿನಿಯರಿಗೆ ಹೊಸದಾಗಿ ಆದೇಶ ಕೊಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ? ಸರ್ಕಾರದವರ ಗಮನಕ್ಕೆ ಬಂದಿದ್ದರೆ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಜನರಲ್ ಆಗಿ ಕೇಳಿದರೆ ಅದಕ್ಕೆ ಉತ್ತರ ಕೊಡಲಾರೆ, ಯಾವುದಾದರೂ ನಿರ್ದಿಷ್ಟವಾದ ಉದಾಹರಣೆ ಇದ್ದರೆ ಅದನ್ನು ತಿಳಿಸಿದರೆ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಾನ್ಯ ಮುನಿಚನ್ನಪ್ಪನವರು ಎರಡೂವರೆ ವರ್ಷದ ಹಿಂದೆ ಕೊಟ್ಟಂಥ ಅರ್ಜಿಗೆ ಇವತ್ತಿನವರೆಗೂ ಯಾವ ಪರಿಹಾರವೂ ಆಗಿಲ್ಲ ಎಂದ ಮೇಲೆ ನಿಮ್ಮ ಅಧಿಕಾರಿಗಳು ನಿಮ್ಮ ಮಾತನ್ನು ಕೇಳುತ್ತಾ ಇಲ್ಲವೇ ? ಯಾವ ಸೆಕ್ರೆಟರಿ ಕೂಡ ಹೋಗಲ್ಲ ಎಂದ ಹೇಳಿದರು, ಎಂದಮೇಲೆ ನಿಮ್ಮ ಅಧಿಕಾರಿಗಳು ಇವತ್ತಿನವರೆಗೂ ಆ ಕೆಲಸವನ್ನು ಮಾಡದೇ ಇರುವುದನ್ನು ನೋಡಿದರೆ ನಿಮ್ಮ ಮಾತಿಗೆ ತಿರಸ್ಕಾರ ಮಾಡಿದಂತಾಗಲಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಆ ಕೆರೆ ತೂಬಿನ ಬಗ್ಗೆ ಎಷ್ಟು ಆಗಿದೆಯೋ ಗೊತ್ತಿಲ್ಲ ವಿಚಾರ ಮಾಡುತ್ತೇನೆ.

ಶ್ರೀ ಡಿ. ಮುನಿಚನ್ನಪ್ಪ.—23ನೇ ಐಟಂ 9,996 ರೂಪಾಯಿಗಳನ್ನು ಹೆಂಗದರೂರು ಕೆರೆ ಫೀಡರ್ ಚಾನಲ್‌ಗೆ ಎಂದು ಕೊಟ್ಟಿದ್ದೀರಿ. ಒಂದೇ ದಿವಸದಲ್ಲಿ ಈ ಚಾನಲ್‌ನ ಏರಿ ಕಿತ್ತು ಹೋಗಿದೆ ಇದರ ವಿಚಾರದಲ್ಲಿ ಏನು ಕ್ರಮತೆಗೆದು ಕೊಂಡಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಈಗ ಹೇಳಿದ್ದೀರಿ ವಿಚಾರ ಮಾಡಿಸುತ್ತೇನೆ.

Appointment of a Chairman for the Coffee Curing Works, Chickmagalur.

*Q.—187 Smt. B. L. SUBBAMMA (Chickmagalur).—

Will the Government be pleased to state.—

(a) whether it is a fact that the Chairman of the Coffee Curing Works, Chickmagalur, has tendered his resignation and if so, the reasons for the same;

(b) whether they have received any proposal to appoint a non-official as Chairman for the said Works;

(c) whether they intend to appoint an high officer as the Managing Director and Chairman of the said Works with a view to improve the administration ?

A.—Sri K. MALLAPPA (Minister for Industies and Commerce).—

(a) Yes. He resigned because he felt that as Chairman he would not effectively function without the powers of a Managing Director.

(b) No.

(c) The matter is under consideration.

ಶ್ರೀಮತಿ ಬಿ. ಎಲ್. ನುಬ್ಬಮ್ಮ.—ಅಧ್ಯಕ್ಷರನ್ನು ನೇಮಕ ಮಾಡಬೇಕಾದರೆ ಅಲ್ಲಿ ಕಾಫಿ ಬೆಳೆಯುತಕ್ಕ ರೈತರಿಗೆ ನ್ಯಾಯ ಸರಿಯಾಗಿ ದೊರತಿಲ್ಲ. ಆದ್ದರಿಂದ ಅಧ್ಯಕ್ಷರನ್ನು ಅಲ್ಲಿ ನೇಮಿಸಬೇಕೆಂದು ಸರ್ಕಾರದವರಿಗೆ ಕೋರಿಕೆ ಬಂದಿತ್ತೇ?

† ಶ್ರೀ ಕೆ. ಮಲ್ಲಪ್ಪ.—ಕೋರಿಕೆ ಬಂದಿದೆ.

ಶ್ರೀಮತಿ ಬಿ. ಎಲ್. ನುಬ್ಬಮ್ಮ.—ಅಧ್ಯಕ್ಷರನ್ನು ನೇಮಿಸಿದ ಮೇಲೆ ಅವರಿಗೆ ಮ್ಯಾನೇಜಿಂಗ್ ಡೈರೆಕ್ಟರಿಗೆ ಇರತಕ್ಕ ಯಾವುದೂ ಅಧಿಕಾರ ಇಲ್ಲ ಆದ್ದರಿಂದ ಅಧಿಕಾರ ನಡೆಸುವುದಕ್ಕೆ ಶಕ್ಯವಿಲ್ಲ ಎಂದು ಹೇಳಿ ರಾಜೀನಾಮೆ ಕೊಟ್ಟಿದ್ದರಿಂದ, ಬೆಳೆಗಾರರ ಹಿತದೃಷ್ಟಿಯಿಂದ ಅನುಕೂಲ ಮಾಡಿದ ಹಾಗಾಯಿತೇ? ಮುಂದೆ ಆದರೂ ಈ ವಿಚಾರವನ್ನು ಪರ್ಯಾಲೋಚನೆ ಮಾಡುತ್ತೀರಾ?

ಶ್ರೀ ಕೆ. ಮಲ್ಲಪ್ಪ.—ಡೆಪ್ಯೂಟಿ ಕಮಿಷನರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದೇನೆ, ಅದರ ಮೇಲ್ವಿಚಾರಣೆ ಅವರು ನಡೆಸುತ್ತಾ ಇದ್ದಾರೆ.

Vesting of Powers to the Vigilance Commission to investigate into the Illegal Gratification and Corruption prevailing among private persons.

*Q.— 641. **Sri E. NARAYANA GOWDA** (Bangarpet).—

Will the Government be pleased to state.—

(*a*) whether the Vigilance Commission, which would be constituted, would be vested with power to investigate into the illegal gratification and corruption prevailing among private persons;

(*b*) if not, the reasons therefor?

A.—**Sri S. NIJALINGAPPA** (Chief Minister).—

(*a*) No.

(*b*) Government cannot interfere with private persons' dealings Those who are aggrieved are free to go to a Court of Law for redress.

ಶ್ರೀ ಎಸ್. ಎಂ. ಕೃಷ್ಣ.—ಈ ವಿಜಿಲೆನ್ಸ್ ಕಮೀಷನ್‌ನ್ನು ಹಿಂದೆ ಒಂದುವಾರ, ಎಂಟು ದಿವಸದಲ್ಲಿ ನೇಮಕ ಮಾಡುತ್ತೇವೆ ಎಂದು ಹೇಳಿದ್ದೀರಿ. ಇಲ್ಲಿಯವರೆಗೂ 8 ದಿವಸ, 8 ತಿಂಗಳೂ ಕಳೆದರೂ ನೇಮಕ ಮಾಡದೇ ಇರುವುದಕ್ಕೆ ಕಾರಣವೇನು?

† ಶ್ರೀ ಎಸ್. ನಿಜಲಿಂಗಪ್ಪ.—8 ದಿವಸ ಎನ್ನುವುದೂ ನರಿ, 8 ತಿಂಗಳು ಎನ್ನುವುದೂ ನರಿ. ಆದಷ್ಟು ಜಾಗ್ರತೆ ಮಾಡುತ್ತೇವೆ ಎಂದು ಹೇಳಿದ್ದೆ. ಜನ ಸಿಕ್ಕುವುದು ಬಹಳ ಕಷ್ಟ ಇದೆ, ಎರಡು ಮೂರು ಕಡೆಯಲ್ಲಿ ಪ್ರಯತ್ನಪಟ್ಟರೂ ಸಾಧ್ಯವಾಗಿಲ್ಲ, ಹುಡುಕುತ್ತಾ ಇದ್ದೇವೆ.

ಶ್ರೀ ಕೆ. ಲಕ್ಕಪ್ಪ.—ಕೇಂದ್ರ ಗೃಹ ಮಂತ್ರಿ ನಂದಾ ಅವರು ಸದಾಚಾರ ಸಮಿತಿಯನ್ನು ಅತಿ ಶೀಘ್ರವಾಗಿ ಎಲ್ಲಾ ಸ್ಟೇಟ್‌ಗಳಲ್ಲೂ ನೇಮಕ ಮಾಡಬೇಕೆಂದು ಆದೇಶ ನೀಡಿದ್ದಾರೆ ಎಂದು ವರ್ತಮಾನ ಬಂದಿದೆ. ಈ ಬಗ್ಗೆ ಸರ್ಕಾರದವರು ಏಕೆ ಸುಮ್ಮನೆ ಇದ್ದಾರೆ?

ಶ್ರೀ ಎಸ್. ನಿಜಲಿಂಗಪ್ಪ.—ಸದಾಚಾರ ಸಮಿತಿಗೂ ಈ ಪ್ರಶ್ನೆಗೂ ಸಂಬಂಧವಿಲ್ಲ.

Sri G. V. GOWDA.—If private persons indulge in this illegal gratification or corruption, may I know whether the Government cannot interfere to stop it?

Sri S. NIJALINGAPPA.—If my friend has got a complaint against a private person, he can go to a court of law.

ಶ್ರೀ ಎ. ಜೆ. ದೊಡ್ಡಮೇಟಿ.—ಸ್ಥಾನಿಕ ರಾಜ್ಯ ಸಂಸ್ಥೆಗಳು ಅಥವಾ ಕೋ-ಆಪರೇಟಿವ್ ಸಂಸ್ಥೆಗಳು ಮತ್ತು ಶಾಸನ ಸಭಾ ಸದಸ್ಯರು ಇವರೆಲ್ಲರೂ ಖಾಸಗೀ ಜನರೊಳಗೆ ಬರುತ್ತಾರೆಯೇ ಅಥವಾ ಅವರು ಒಂದು ಸಂಸ್ಥೆಯೇ?